636 (1007) ಶ್ರೀ ಹೊನ್ನಾಳಿ ಜಬ್ಬಾರ್ ಖಾನ್ ಹಂಯಾತ್‌ಖಾನ್ (ಹುಬ್ಬಳ್ಳಿ) –ಕಾರ್ಮಿಕ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ಉದ್ಯೋಗ ಮತ್ತು ತರಬೇತಿ ಇಲಾಖೆಯಲ್ಲಿ ಎ ವಿ ಟಿ ಎಸ್ ಕೇಂದ್ರಗಳು ಕಳೆದ ಮೂರು ವರ್ಷಗಳಿಂದ ಮುಚ್ಚಲ್ಪಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ? ಇದಕ್ಕೆ ಕಾರಣವೇನು ,

ಆ) ಎ ವಿ ಟಿ ಎಸ್ ಕೇಂದ್ರಗಳನ್ನು ಸರ್ಕಾರ ಪುನಃ ಪ್ರಾರಂಭಿಸುವ ವಿಚಾರ ಮಾಡಿದೆಯೇ ಹಾಗಿಲ್ಲದಿದ್ದಲ್ಲಿ ಯಾವಾಗ ಪ್ರಾರಂಭಮಾಡಲಾಗುವುದು ?

ಇ) ಕೋಟಿಗಟ್ಟಲೆ ಬೆಲೆಬಾಳುವ ಯಂತ್ರೋಪಕರಣ, ಪೀರೋಪಕರಣ ಹಾಗೂ ಸಾಮಗ್ರಿಗಳು ನಷ್ಟದ ಅಂಚಿನಲ್ಲಿರುವುದಕ್ಕೆ ಹೊಣೆಗಾರರು ಯಾರು ಹಾಗೂ ಇದಕ್ಕೆ ಕಾರಣಗಳೇನು ?

ಶ್ರೀ ಇಕ್ಬಾಲ್ ಅನ್ಸಾರಿ (ಕಾರ್ಮಿಕ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು) –

ಅ) ಇಲ್ಲ

ಆ) ಉದ್ಭವಿಸುವುದಿಲ್ಲ

ಇ) ಎಲ್ಲಾ ಯಂತ್ರೋಪಕರಣಗಳು ಮತ್ತು ಪೀರೋಪಕರಣ ಸುಸ್ಥಿತಿಯಲ್ಲಿದ್ದು ತರಬೇತಿಗೆ ಉಪಯೋಗಿಸಲಾಗುತ್ತಿದೆ

ಭಿಕ್ಷಾಟನಾ ಪದ್ಧತಿಯ ನಿರ್ಮೂಲನೆ

637 (121) ಶ್ರೀ ಐವಾನ್ ನಿಗ್ಲಿ (ನಾಮಾಂಕಿತ) – ಸಮಾಜ ಕಲ್ಯಾಣ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ಬಿಕ್ಷಾಟನೆಯ ಅದಿನಿಯಮದ ಉಪಬಂಧಗಳನ್ವಯ ಬಿಕ್ಷಾಟನೆಯನ್ನು ನಿರ್ಮೂಲನೆಗೊಳಿಸಲು ತೆಗೆದುಕೊಂಡ ಕ್ರಮಗಳು ,

ಆ) ಕಳೆದ ಮೂರು ವರ್ಷಗಳಲ್ಲಿ ನಿಗದಿಗೊಳಿಸಲಾದ ಮೊತ್ತ ,

ಇ) ಬಿಕ್ಷಾಟನಾ ಪದ್ಧತಿಯನ್ನು ನಿರ್ಬಂಧಿಸಲು ಸರ್ಕಾರದಲ್ಲಿ ಏನಾದರೂ ಕ್ರಮವಿದೆಯೇ ,

ಈ) ಟ್ರಾಫಿಕ್ ಸಿಗ್ನಲ್‌ಗಳಲ್ಲಿ ಬಿಕ್ಷಾಟನಾ ಪದ್ಧತಿ ಬದಲಾಗದೇ ಹೆಚ್ಚಾಗಿದ್ದು, ಪ್ರತಿಯೊಬ್ಬರಿಗೂ ಉಪದ್ರವ ಉಂಟುಮಾಡುತ್ತಿದ್ದರೂ, ಸರ್ಕಾರವು ಅಧಿನಿಯಮ/ ಯೋಜನೆಯನ್ನು ಏಕೆ ಅನುಷ್ಠಾನಗೊಳಿಸುತ್ತಿಲ್ಲ ?

ಶ್ರೀ ಬಾಲಚಂದ್ರ ಲ ಜಾರಕಿಹೊಳಿ (ಸಮಾಜ ಕಲ್ಯಾಣ ಸಚಿವರು) –

ಅ) ಕರ್ನಾಟಕ ಬಿಕ್ಷಾಟನೆ ನಿಷೇಧ ಅಧಿನಿಯಮ 1975ರಲ್ಲಿನ ಅವಕಾಶಗಳಂತೆ ಕೇಂದ್ರ ಪರಿಹಾರ ಸಮಿತಿಯು ಬಿಕ್ಷಾಟನಾ ಪದ್ಧತಿಯನ್ನು ಹೋಗಲಾಡಿಸಲು ಕ್ರಮಕೈಗೊಳ್ಳುತ್ತಿದೆ ಮೇಲೆ ತಿಳಿಸಿದ ಅಧಿನಿಯಮದಡಿ ಅದಿಕಾರ ಕೊಡಲ್ಪಟ್ಟ ಅಧಿಕಾರಿಗಳು ಬಿಕ್ಷಾಟನೆಯಲ್ಲಿ ತೊಡಗಿದ ವ್ಯಕ್ತಿಗಳನ್ನು ಬಂದಿಸಿ, ತಾಲ್ಲೂಕು ಮ್ಯಾಜಿಸ್ಟ್ರೇಟರ ಮುಂದೆ ಹಾಜರುಪಡಿಸುತ್ತಾರೆ ಪ್ರಾದಮಿಕ ತನಿಖೆಯ ನಂತರ ಮ್ಯಾಜಿಸ್ಟ್ರೇಟ್‌ರವರ ಆದೇಶದ ಮೇರೆಗೆ ಅವರನ್ನು ನಿರಾಶ್ರಿತರ ಪರಿಹಾರ ಕೇಂದ್ರಗಳಲ್ಲಿ ಬಂಧನದಲ್ಲಿಡಲಾಗುವುದು ಬಂಧಿತ ಭಿಕ್ಷುಕರಿಗೆ ಉಚಿತ ಆಹಾರ, ವಸತಿ, ಹಾಸಿಗೆ, ಸಮವಸ್ತ್ರ ಹಾಗೂ ವೈದ್ಯಕೀಯ ಸೌಲಭ್ಯಗಳನ್ನು ಒದಗಿಸಲಾಗುತ್ತದೆ ಅಲ್ಲದೆ ಪುನರ್ವಸತಿ ಕಾರ್ಯಕ್ರಮದಡಿ ದೃಢಕಾಯ

ಬಿಕ್ಷುಕರಿಗೆ ಸಾಕ್ಷರತೆ, ಹೊಲಿಗೆ, ಬುಕ್ ಬೈಂಡಿಂಗ್, ಕಮ್ಮಾರಿಕೆ, ತೆಂಗಿನ ನಾರಿನ ಮ್ಯಾಟ್ ತಯಾರಿಕೆ, ಕೃಷಿ ಮತ್ತು ತೋಟಗಾರಿಕೆಗಳಲ್ಲಿ ತರಬೇತಿ ನೀಡಲಾಗುತ್ತದೆ

ಆ) ನಗರ ಸ್ಥಳೀಯ ಸಂಸ್ಥೆಗಳು ಸಂಗ್ರಹಿಸಿ ಹಾಗೂ ಪಾವತಿಸುವ ಬಿಕ್ಷುಕರ ಕರದಿಂದ ಕೇಂದ್ರ ಪರಿಹಾರ ಸಮಿತಿಯು ಅದರ ಖರ್ಚು-ವೆಚ್ಚಗಳನ್ನು ಭರಿಸುತ್ತಿದೆ ಕಳೆದ ಮೂರು ವರ್ಷಗಳಲ್ಲಿ ಈ ರೀತಿ ಸಂಗ್ರಹಿಸಿದ ಹಾಗೂ ಖರ್ಚು ಮಾಡಲಾದ ಮೊತ್ತದ ವಿವರಗಳನ್ನು ಈ ಕೆಳಕಂಡಂತೆ ನೀಡಲಾಗಿದೆ –

ವರ್ಷ	ಸಂಗ್ರಹಿಸಲ್ಪಟ್ಟ ಮೊತ್ತ ರೂ	ವೆಚ್ಚ ರೂ
2004–05	5,76,39,500	2,72,07,200
2005–06	6,35,22,000	4,33,94,400
2006–07	8,33,07,000	5,92,00,800

ಇ) ಮೇಲಿನ ಪ್ರಶ್ನೆ (ಅ)ಕ್ಕೆ ನೀಡಿದ ಉತ್ತರದಲ್ಲಿ ಕಾಣಿಸಿದ ಕ್ರಮಗಳ ಜೊತೆಗೆ ಜೂನ್ 2007ರಲ್ಲಿ ಸಮಾಜ ಕಲ್ಯಾಣ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಈ ಕೆಳಕಂಡ ಅಧಿಕಾರಿಗಳನ್ನೊಳಗೊಂಡಂತೆ ಒಂದು ಸಭೆಯನ್ನು ಆಯೋಜಿಸಲಾಗಿತ್ತು

(1) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಯುಕ್ತರು, (2) ಬೆಂಗಳೂರು ಪೊಲೀಸ್ ಕಮೀಷನರ್, (3) ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಕಾರ್ಯದರ್ಶಿ, (4) ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, (5) ನಗರಾಭಿವೃದ್ಧಿ ಇಲಾಖೆಯ ಕಾರ್ಯದರ್ಶಿಗಳು, (6) ಡೈರೆಕ್ಟರ್ ಜನರಲ್ ಅಂಡ್ ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್ ಮತ್ತು ಇತರೆ ಸಂಬಂಧಪಟ್ಟ ಅಧಿಕಾರಿಗಳು

ಸದರಿ ಸಭೆಯಲ್ಲಿ ಬಿಕ್ಷಾಟನಾ ಅಧಿನಿಯಮವನ್ನು ಅನುಷ್ಠಾನಗೊಳಿಸುವಂತೆ ಹಾಗೂ ರಾಜ್ಯದಲ್ಲಿ ಬಿಕ್ಷಾಟನಾ ಪದ್ಧತಿಯನ್ನು ನಿರ್ಬಂಧಿಸಲು ಕಟ್ಟುನಿಟ್ಟಿನ ಸೂಚನೆಯನ್ನು ನೀಡಲಾಗಿದೆ ಅದರಂತೆ ಕಾರ್ಯದರ್ಶಿ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಬೆಂಗಳೂರು ಪೊಲೀಸ್ ಕಮೀಷನರ್, ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ, ಕಾರ್ಯದರ್ಶಿ, ಕೇಂದ್ರ ಪರಿಹಾರ ಸಮಿತಿ, ಬೆಂಗಳೂರು ಇವರು ಜೂನ್ ಮತ್ತು ಜುಲೈ 2007ರಲ್ಲಿ ಬಿಕ್ಷುಕರನ್ನು ಬಂಧಿಸಲು ಮತ್ತು ಅವರಿಗೆ ಪರಿಹಾರವನ್ನು ನೀಡಲು ವಿಶೇಷ ಅಂದೋಲನವನ್ನು ಹಮ್ಮಿಕೊಂಡಿದ್ದರು

ಈ) ಕರ್ನಾಟಕ ಬಿಕ್ಷಾಟನಾ ನಿಷೇಧ ಅದಿನಿಯಮ 1975ನ್ನು ಸರ್ಕಾರವು ಕಟ್ಟುನಿಟ್ಟಾಗಿ ಅನುಷ್ಠಾನಗೊಳಿಸುತ್ತಿದೆ